**JULY 11, 2024**

**AKASHAVANI - DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಗ್ರಾಮೀಣ ಭಾಗದ 20 ಸಾವಿರ ಮಕ್ಕಳಿಗೆ, ನೀಟ್ ಮತ್ತು ಸಿ.ಇ.ಟಿ. ಪರೀಕ್ಷಾ ಪೂರ್ವ, ಉಚಿತ ತರಬೇತಿ – ಮಧು ಬಂಗಾರಪ್ಪ.**
- **ವಿಷಕಾರಿ ಹಾವು ಕಡಿತದ ಪ್ರಕರಣ; ಸರ್ಕಾರಿ ಆಸ್ಪತ್ರೆ, ಆಯ್ದ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, 'ಆ್ಯಂಟಿ ವೆನಮ್' ಉಚಿತ ವ್ಯವಸ್ಥೆ – ದಿನೇಶ್ ಗುಂಡೂರಾವ್.**
- **ಜಪಾನ್ ಮತ್ತು ದಕ್ಷಿಣಕೋರಿಯಾ ರಾಷ್ಟ್ರಗಳಿಂದ, ರಾಜ್ಯದಲ್ಲಿ 25 ಸಾವಿರ ಕೋಟಿ ರೂಪಾಯಿ ಹೂಡಿಕೆ, ವಾಗ್ದಾನ – ಎಂ.ಬಿ. ಪಾಟೀಲ.**
- **ಇಂದು ಜುಲೈ 11, ವಿಶ್ವ ಜನಸಂಖ್ಯಾ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ನೀಟ್ ಮತ್ತು ಸಿ.ಇ.ಟಿ. ಪರೀಕ್ಷೆಗೆ, ಪೂರ್ವ ತರಬೇತಿಯನ್ನು ಗ್ರಾಮೀಣ ಭಾಗದ 20 ಸಾವಿರ ಮಕ್ಕಳಿಗೆ, ಸರ್ಕಾರ ಉಚಿತವಾಗಿ ನೀಡಲಿದೆ ಎಂದು, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಕೊಪ್ಪಳ ಜಿಲ್ಲೆ, ಕುಕನೂರ ತಾಲೂಕು ಕೋಮಲಾಪುರ ಗ್ರಾಮದಲ್ಲಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆ ಅಡಿ, ಹೊಸದಾಗಿ ನಿರ್ಮಿಸಲಾದ, ಸರಕಾರಿ ಪ್ರೌಢ ಶಾಲೆಯ ನಾಮಫಲಕ ಉದ್ಘಾಟಿಸಿ, ಮಾತನಾಡಿದರು.**

<><><>

**ಮಧು ಬಂಗಾರಪ್ಪ ಧ್ವನಿ 27 ಸೆಕೆಂದುಗಳು**

<><><>

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಹಾಗೂ ಶಾಸಕ ಬಸವರಾಜ ರಾಯರಡ್ಡಿ, ಅಧ್ಯಕ್ಷತೆ ವಹಿಸಿದ್ದರು.

<><><>

ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ, ಅಡಹಳ್ಳಟ್ಟಿಯ ಹಿಪ್ಪರಗಿ ತೋಟದ, ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಗೆ, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ, ಒಂದನೇ ತರಗತಿಗೆ ಪ್ರವೇಶ ಪಡೆಯುವ ಮಕ್ಕಳ ಹೆಸರಲ್ಲಿ, ಶಾಲಾ ಮುಖ್ಯೋಪಾಧ್ಯಾಯ ಸಿದ್ದಮಲ್ಲ ಖೋತ ಅವರು, ಸಾವಿರ ರೂಪಾಯಿ ಠೇವಣಿ ಇರಿಸಿ, ಪ್ರೋತ್ಸಾಹಿಸುತ್ತಿದ್ದಾರೆ. ಕರ್ನಾಟಕ ಮಹಾರಾಷ್ಟ್ರ ಗಡಿ ಭಾಗದಲ್ಲಿ, 2005 ರಲ್ಲಿ ಸ್ಥಾಪನೆಯಾಗಿರುವ ಈ ಶಾಲೆಯಲ್ಲಿ, ಠೇವಣಿ ಯೋಜನೆಯ ಪರಿಣಾಮ, ಶಾಲಾ ಮಕ್ಕಳ ದಾಖಲಾತಿ ಹೆಚ್ಚಿದ್ದು, ಕನ್ನಡ ಮಾಧ್ಯಮ ಶಾಲೆಯ ಉಳಿವಿಗೂ ಕಾರಣವಾಗಿದೆ. ಈ ಬಗ್ಗೆ ಆಕಾಶವಾಣಿಗೆ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಶಾಲೆಯ ಪ್ರಧಾನ ಗುರು ಸಿದ್ದಮಲ್ಲ ಖೋತ.

<><><>

ಸಿದ್ದಮಲ್ಲ ಖೋತ ಧ್ವನಿ 40 ಸೆಕೆಂದುಗಳು

<><><>

ಸಮಗ್ರ ಆರೋಗ್ಯ ಮಾಹಿತಿ ವೇದಿಕೆಯಲ್ಲಿ ದಾಖಲಿಸಿರುವ ಮಾಹಿತಿ ಪ್ರಕಾರ, ಈ ವರ್ಷ ರಾಜ್ಯದಲ್ಲಿ ಹಾವು ಕಡಿತದ 5 ಸಾವಿರದ 418 ಪ್ರಕರಣಗಳು ವರದಿಯಾಗಿದ್ದು, 36 ಸಾವುಗಳು ಸಂಭವಿಸಿವೆ. 2030 ರ ವೇಳೆಗೆ, ವಿಷಕಾರಿ ಹಾವು ಕಡಿತದ ಪ್ರಕರಣಗಳಲ್ಲಿ ಯಾವುದೇ ಸಾವು ಸಂಭವಿಸದಂತೆ, ಕ್ರಮ ಕೈಗೊಳ್ಳಲು ರಾಷ್ಟ್ರೀಯ ಆರೋಗ್ಯ ಮಿಷನ್ ನೀಲನಕ್ಷೆ ಸಿದ್ಧಪಡಿಸಿದೆ. ಮಲಬಾರ್ ಪಿಟ್ ವೈಪರ್, ಹಂಪ್ ನೋಸ್ಡ್ ಪಿಟ್ ವೈಪರ್, ಸ್ಲೆಕ್ಟ್ಯಾಕಲ್ಡ್ ಕೋಬ್ರಾ, ರಸೆಲ್ಸ್ ವೈಪರ್ ಹಾಗೂ ಕಾಮನ್ ಕ್ರೇಟ್ ಮುಂತಾದ, ವಿಷಕಾರಿ ಹಾವುಗಳ ಕಡಿತದಿಂದ ಸಂಭವಿಸುವ ಪ್ರಕರಣ ಹಾಗೂ ಸಾವುಗಳನ್ನು, ಅಧಿಸೂಚಿತ ರೋಗಗಳು ಎಂದು ರಾಜ್ಯ ಸರ್ಕಾರ ಘೋಷಿಸಿದೆ.

<><><>

ಆರೋಗ್ಯ ಖಾತೆ ಸಚಿವ ದಿನೇಶ್ ಗುಂಡೂರಾವ್ ನೇತೃತ್ವದಲ್ಲಿ ಆರೋಗ್ಯ ಸೌಧದಲ್ಲಿ ಬುಧವಾರ, ಈ ಕುರಿತು ಮಹತ್ವದ ಸಭೆ ನಡೆಯಿತು. ಹಾವು ಕಡಿತ ನಿರ್ಲಕ್ಷಿಸಲ್ಪಟ್ಟ ಉಷ್ಣ ವಲಯದ ಕಾಯಿಲೆ – ಎನ್.ಟಿ.ಡಿ. ಎಂದು ಗುರುತಿಸಲಾಗಿದ್ದು, ಒನ್ ಹೆಲ್ತ್ ಯೋಜನೆ ಅಡಿ, ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳು, ತಾಲೂಕು ಆಸ್ಪತ್ರೆಗಳು ಹಾಗೂ ಆಯ್ದ ಸಮುದಾಯ ಆರೋಗ್ಯ ಕೇಂದ್ರಗಳನ್ನು ಹಾವು ಕಡಿತದ ಚಿಕಿತ್ಸಾ ಕೇಂದ್ರಗಳನ್ನಾಗಿ ಗುರುತಿಸಿ, ಆಂಟಿ ವೆನಮ್ ಉಚಿತವಾಗಿ ಒದಗಿಸುವಂತೆ ನಿರ್ದೇಶಿಸಲಾಗಿದೆ.

<><><>

ಡೆಂಘಿ ನಿಯಂತ್ರಣಕ್ಕೆ ಸಂಘಟಿತ ಪ್ರಯತ್ನ ಅಗತ್ಯ ಎಂದು, ಕೇಂದ್ರ ಆರೋಗ್ಯ ಖಾತೆ ಸಚಿವ ಜೆ.ಪಿ. ನಡ್ಡಾ ತಿಳಿಸಿದ್ದಾರೆ. ಡೆಂಘಿ ನಿಯಂತ್ರಣಕ್ಕೆ ಕೈಗೊಳ್ಳಲಾಗಿರುವ ಸಿದ್ಧತಾ ಕ್ರಮಗಳ ಬಗ್ಗೆ, ದಿಲ್ಲಿಯಲ್ಲಿ ಅವರು ಪರಾಮರ್ಶೆ ನಡೆಸಿದರು. ಕೇಂದ್ರೀಯ ಆಸ್ಪತ್ರೆಗಳಲ್ಲಿ ಡೆಂಘಿ ನಿರ್ವಹಣೆಗೆ ಪ್ರತ್ಯೇಕ ವಾರ್ಡ್ ಸ್ಥಾಪಿಸುವಂತೆ, ಎಲ್ಲ ರಾಜ್ಯಗಳಿಗೆ ಸೂಚಿಸಲಾಗಿದೆ. ಸದ್ಯದಲ್ಲೇ ಸಹಾಯವಾಣಿ ಆರಂಭವಾಗಲಿದೆ ಎಂದರು.

<><><>

2025ರ ಫೆಬ್ರವರಿಯಲ್ಲಿ, ಬೆಂಗಳೂರಿನಲ್ಲಿ ಜರುಗಲಿರುವ, ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ, ಜಪಾನ್ ಮತ್ತು ದಕ್ಷಿಣ ಕೋರಿಯಾ ರಾಷ್ಟಗಳು, 25 ಸಾವಿರ ಕೋಟಿ ರೂಪಾಯಿ ಹೂಡಿಕೆಯ ವಾಗ್ದಾನ ಮಾಡಲಿವೆ ಎಂದು, ಮಧ್ಯಮ ಮತ್ತು ಬೃಹತ್ ಕೈಗಾರಿಕಾ ಖಾತೆ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಸಚಿವರು, ಇತ್ತೀಚೆಗೆ  ಉಭಯ ದೇಶಗಳಿಗೆ ತಾವು ಭೇಟಿ ನೀಡಿದ್ದು, ಫಲಪ್ರದವಾಗಿದೆ.

35 ಪ್ರಮುಖ ಕಂಪೆನಿಗಳು, ಒಟ್ಟು 6 ಸಾವಿರದ 450 ಕೋಟಿ ರೂಪಾಯಿ ಹೂಡಿಕೆಯ ಬದ್ಧತೆ; ಸಾವಿರಕ್ಕೂ ಹೆಚ್ಚು ಉದ್ಯೋಗಾವಕಾಶಗಳ ಸೃಷ್ಟಿಯಾಗುವ ಸಾಧ್ಯತೆ ಇದೆ ಎಂದು, ಸಚಿವರು ಹೇಳಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಇಂದು ಜುಲೈ 11, ವಿಶ್ವ ಜನಸಂಖ್ಯಾ ದಿನಾಚರಣೆ. 1989ರಲ್ಲಿ ವಿಶ್ವ ಸಂಸ್ಥೆ ಅನುಮೋದಿಸಿದ ಈ ದಿನ, ಜಾಗತಿಕ ಜನಸಂಖ್ಯೆಯ, 2024ನೇ ಸಾಲಿನ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಮೀಸಲಾಗಿರುವ ದಿನ. 'ಸಕಾಲಿಕ ಗರ್ಭಧಾರಣೆ ಹಾಗೂ ಎರಡು ಮಕ್ಕಳ ನಡುವೆ ಅಂತರ ಕಾಪಾಡುವುದರಿಂದ, ತಾಯಿ ಮತ್ತು ಮಗುವಿನ ಆರೋಗ್ಯ ಉತ್ತಮಗೊಳಿಸುವುದು' ಎಂಬ ಧ್ಯೇಯದೊಂದಿಗೆ, 'ಅಭಿವೃದ್ಧಿ ಹೊಂದಿದ ಭಾರತದ ನೂತನ ಗುರುತಿಗಾಗಿ, ಕುಟುಂಬ ಯೋಜನೆ ಅಳವಡಿಕೆ, ಪ್ರತಿ ದಂಪತಿಯ ಹೆಮ್ಮೆ' ಎಂಬ ಘೋ ' ವಾಕ್ಯದೊಂದಿಗೆ ಈ ಬಾರಿ, ವಿಶ್ವ ಜನಸಂಖ್ಯಾ ದಿನಾಚರಣೆ ಜರುಗಲಿದೆ.

<><><>

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ, ದಿನೇಶ್ ಗುಂಡೂರಾವ್ ಇಂದು ಬೆಳಗ್ಗೆ 10.30ಕ್ಕೆ, ದಾವಣಗೆರೆಯ ಎಸ್.ಎಸ್.ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರ, ಬಿ.ಐ.ಇ.ಟಿ.ಯಲ್ಲಿ ವಿಶ್ವ ಜನಸಂಖ್ಯಾ ದಿನದ ಕಾರ್ಯಕ್ರಮಕ್ಕೆ ಚಾಲನೆ ನೀಡುವರು.

<><><>

ರಾಜ್ಯ ಸರ್ಕಾರ ಐದು ಖಾತ್ರಿ ಯೋಜನೆಗಳನ್ನು ಅನು ್ಠಾನಗೊಳಿಸಲು, ಪರಿಶಿ ್ಟ ಜಾತಿ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆಗೆ ಮೀಸಲಿದ್ದ ಹಣವನ್ನು, ಬಳಸಿ ಕೊಂಡಿದೆ ಎಂಬ ವರದಿಗಳ ಬಗ್ಗೆ, ರಾಷ್ಟ್ರೀಯ ಪರಿಶಿ ್ಟ ವರ್ಗಗಳ ಆಯೋಗ, ಕರ್ನಾಟಕ ಸರ್ಕಾರದಿಂದ ವಿಸ್ತೃತ ವರದಿಯನ್ನು ಕೇಳಿದೆ. ಈ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ, ಪತ್ರಿಕೆಯೊಂದರ ವರದಿಯನ್ನು ಉಲ್ಲೇಖಿಸಿರುವ ಆಯೋಗ, ಈ ವಿ ್ಯದ ಬಗ್ಗೆ ಏಳು ದಿನಗಳಲ್ಲಿ ವಿಸ್ತೃತ ವರದಿ ಸಲ್ಲಿಸುವಂತೆ, ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. ಪರಿಶಿಷ್ಟ ಜಾತಿಗಳ ಅಭ್ಯುದಯಕ್ಕೆ ಸಂಬಂಧಿಸಿದ ಸಮಸ್ಯೆಗಳ ನಿವಾರಣೆಗೆ ಆಯೋಗ ಬದ್ಧವಾಗಿದ್ದು, ರಾಜ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆಗಳಿಗೆ ಉಪ ಯೋಜನೆಗಳಿಂದ, 14 ಸಾವಿರ ಕೋಟಿ ರೂಪಾಯಿ ಬಳಸಿಕೊಂಡಿರುವ ವಿಚಾರದ ವಾಸ್ತವಾಂಶ ಅರಿಯಲು ಬದ್ಧವಾಗಿದೆ ಎಂದು, ಆಯೋಗ ತನ್ನ ಪತ್ರದಲ್ಲಿ ಸ್ಪಷ್ಟ ಪಡಿಸಿದೆ.

<><><>

ಕರ್ನಾಟಕ ಮಾಧ್ಯಮ ಅಕಾದೆಮಿಗೆ, ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವ ಆಯೇ ಾ ಖಾನಂ ಅವರಿಗೆ ಹಾಗೂ ಎಲ್ಲ ನೂತನ ಸದಸ್ಯರುಗಳಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದ್ದಾರೆ. ಇದೇ ಮೊದಲ ಬಾರಿಗೆ ಮಾಧ್ಯಮ ಅಕಾದೆಮಿ ಅಧ್ಯಕ್ಷ ಸ್ಥಾನವನ್ನು ನಿರಂತರವಾಗಿ ವೃತ್ತಿಪರತೆ ಕಾಪಾಡಿಕೊಂಡು ಬಂದಿರುವ, ಅಲ್ಪಸಂಖ್ಯಾತ ಸಮುದಾಯದ ಹಿರಿಯ ಮಹಿಳಾ ಪ್ರತಿನಿಧಿಯೊಬ್ಬರು ಅಲಂಕರಿಸಿದ್ದಾರೆ ಎಂದು ಮುಖ್ಯಮಂತ್ರಿ ತಮ್ಮ ಶುಭಾಶಯ ಸಂದೇಶದಲ್ಲಿ, ತಿಳಿಸಿದ್ದಾರೆ. ಆಯೇ ಾ ಖಾನಂ ಅವರು, ಕಲ್ಯಾಣ ಕರ್ನಾಟಕದ ಕಲಬುರಗಿ ಜಿಲ್ಲೆಯವರಾಗಿದ್ದಾರೆ. ಚಿತ್ರದುರ್ಗದ ಹಿರಿಯ ಪತ್ರಕರ್ತ ಅಹೋಬಳಪತಿ, ಬೆಂಗಳೂರಿನ ಪತ್ರಿಕಾ ಛಾಯಾಗ್ರಾಹಕ ಕೆ.ವೆಂಕಟೇಶ್ ಮತ್ತು ಕೊಪ್ಪಳದ ಹಿರಿಯ ಪತ್ರಕರ್ತ ಕೆ.ನಿಂಗಜ್ಜ ಅವರನ್ನು ಅಕಾದೆಮಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

<><><>

ಇಂಧನ ಇಲಾಖೆಗೆ ಸದ್ಯದಲ್ಲೇ, 2 ಸಾವಿರ ಲೈನ್‌ಮನ್‌ಗಳ ನೇಮಕವಾಗಲಿದೆ. ಈ ಸಂಬಂಧ, 15 ದಿನಗಳಲ್ಲಿ ಅಧಿಸೂಚನೆ ಹೊರಡಿಸಲಾಗುವುದು ಎಂದು, ಇಂಧನ ಖಾತೆ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ. ರಾಯಚೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಸಚಿವರು, ವೈ.ಟಿ.ಪಿ.ಎಸ್ ಹುದ್ದೆಗಳನ್ನು ಭರ್ತಿ ಮಾಡುವಾಗ, ಸ್ಥಳೀಯರಿಗೆ ಆದ್ಯತೆ ನೀಡಲಾಗುವುದು. 371 ಜೆ ಕಲಂ ಮೀಸಲಾತಿ ಅನ್ವಯ, ನೇಮಕಾತಿ ಮಾಡಲಾಗುವುದು ಎಂದರು. ರಾಜ್ಯದಲ್ಲಿ ಇಂಧನ ಕೊರತೆಯಾಗದು. ಪ್ರಸ್ತುತ 14 ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲಿನ ದಾಸ್ತಾನಿದೆ ಎಂದು, ಸಚಿವರು ಸ್ಪಷ್ಟ ಪಡಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ ಧ್ಯೇಯದೊಂದಿಗೆ, ಕರ್ನಾಟಕ ಸಂಭ್ರಮ–50; ಕರ್ನಾಟಕ ಜ್ಯೋತಿ ರಥಯಾತ್ರೆಯ ಭವ್ಯ ಮೆರವಣಿಗೆ, ಚಿತ್ರದುರ್ಗದಲ್ಲಿ ವಿಜೃಂಭಣೆಯಿಂದ ನಡೆಯಿತು.

<><><>

ರಾಜ್ಯ ಮಾನವ ಹಕ್ಕುಗಳ ಆಯೋಗ, ಇಂದು ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳಲ್ಲಿ, ಸಭೆ ನಡೆಸಲಿದೆ.

<><><>

ಗ್ರಾಮೀಣ ಪತ್ರಕರ್ತರಿಗೆ ಆರೋಗ್ಯ ವಿಮೆ, ಉಚಿತ ಬಸ್ ಪಾಸ್ ವಿತರಣೆಯಲ್ಲಿದ್ದ ತಾಂತ್ರಿಕ ತೊಡಕುಗಳನ್ನು ನಿವಾರಿಸಲಾಗಿದೆ ಎಂದು, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಕೋಲಾರದಲ್ಲಿ ತಿಳಿಸಿದ್ದಾರೆ.

<><><>

ಕೊಡಗು ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ, ಅನಧಿಕೃತವಾಗಿ ನಿರ್ಮಿಸಿರುವ, ಗಾಜಿನ ಸೇತುವೆಗಳನ್ನು, ಸೆಪ್ಟೆಂಬರ್ 15ರ ವರೆಗೆ ಬಳಸದಂತೆ, ಜಿಲ್ಲಾಧಿಕಾರಿ ವೆಂಕಟರಾಜಾ ಆದೇಶಿಸಿದ್ದಾರೆ.

<><><>

ಬೀದರನಲ್ಲಿ ಆಯೋಜಿಸಿದ್ದ, "ಲಕ್ಷ ವೃಕ್ಷ ಅಭಿಯಾನಕ್ಕೆ" ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಚಾಲನೆ ನೀಡಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಗ್ರಾಮೀಣ ಭಾಗದ 20 ಸಾವಿರ ಮಕ್ಕಳಿಗೆ, ನೀಟ್ ಮತ್ತು ಸಿ.ಇ.ಟಿ. ಪರೀಕ್ಷಾ ಪೂರ್ವ, ಉಚಿತ ತರಬೇತಿ – ಮಧು ಬಂಗಾರಪ್ಪ.
- ವಿಷಕಾರಿ ಹಾವು ಕಡಿತದ ಪ್ರಕರಣ; ಸರ್ಕಾರಿ ಆಸ್ಪತ್ರೆ, ಆಯ್ದ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, 'ಆಂಟಿ ವೆನಮ್' ಉಚಿತ ವ್ಯವಸ್ಥೆ – ದಿನೇಶ್ ಗುಂಡೂರಾವ್.

- **ಜಪಾನ್ ಮತ್ತು ದಕ್ಷಿಣಕೋರಿಯಾ ರಾಷ್ಟಗಳಿಂದ, ರಾಜ್ಯದಲ್ಲಿ 25 ಸಾವಿರ ಕೋಟಿ ರೂಪಾಯಿ ಹೂಡಿಕೆ, ವಾಗ್ದಾನ – ಎಂ.ಬಿ. ಪಾಟೀಲ.**
- **ಇಂದು ಜುಲೈ 11, ವಿಶ್ವ ಜನಸಂಖ್ಯಾ ದಿನಾಚರಣೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

**ಹರ್ಷ**